# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ.572/2017

ಸಿಡಬ್ಲ್ಯೂ-7 ಪಿಡಬ್ಲ್ಯೂ-2

| | |
|---|---|
| ಹೆಸರುಃ | ಕುಮಾರಿ ಯಲ್ಲಮ್ಮ |
| ತಂದೆಯ ಹೆಸರುಃ | ಪಾಂಡುರಂಗ ರಾವುರ |
| ವಯಸ್ಸುಃ | 30 ವರ್ಷ |
| ಉದ್ಯೋಗಃ | ಮನೆಗೆಲಸ |
| ವಾಸ ಸ್ಥಳಃ | ಬಟಗೇರಾ (ಕೆ) ಗ್ರಾಮ |

ದಿನಾಂಕ 13-09-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ 5 ವರ್ಷಗಳ ಹಿಂದೆ ರಾತ್ರಿ ಸಮಯದಲ್ಲಿ ನಮ್ಮ ತಂದೆ ಪಾಂಡುರಂಗ ಇವರು ಮೂತ್ರ ವಿರ್ಸಜನೆಗೆಂದು ಹೊರಗೆ ಹೋಗಿದ್ದು ಅವರ ಜೋರು ಸಪ್ಪಳ ಕೇಳಿ ಹೊರಗಡೆ ಬಂದು ನೋಡಿದ್ದು ಆಗ ನಮ್ಮ ತಂದೆಯವರು ಸೇಡಂ-ಕೊಡಂಗಲ್ ರೋಡ ದಾಟಿ ಮೂತ್ರ ವಿರ್ಸಜನೆ ಮಾಡಿ ಮರಳಿ ಬರುತ್ತಿರುವಾಗ ಒಂದು ದ್ವಿಚಕ್ರ ವಾಹನ ಚಾಲಕ ನಮ್ಮ ತಂದೆಗೆ ಹಾಯಿಸಿ ಅಪಘಾತ ಮಾಡಿರುತ್ತಾನೆ . ಮೊಟಾರ ಸೈಕಲ ಹೇಗೆ ಬರುತ್ತಿತ್ತು ಎಂದು ನೋಡಿಲ್ಲ. ನಮ್ಮ ತಂದೆಯವರಿಗೆ ಎಡಗಾಲು ಮೊಳಕಾಲು ಕೆಳಗಡೆ ಮುರಿದಿದ್ದು, ಹುಬ್ಬಿನ ಮೇಲೆ, ಬಲಗಾಲ ಮೊಳಕಾಲಿಗೆ ತೆರಚಿದ ಗಾಯ ಆಗಿತ್ತು. ಆಗ ನಾವು ನಮ್ಮ ತಂದೆಯನ್ನು ಸೇಡಂ ಸರಕಾರಿ ಆಸ್ಪತ್ರೆಗೆ ಉಪಚಾರಕ್ಕೆಂದು ಸೇರಿಸಿದ್ದು ಅವರು ಉಪಚಾರ ಪಲಿಸದೇ ತೀರಿಕೊಂಡಿರುತ್ತಾರೆ. ದ್ವಿಚಕ್ರ ವಾಹನದ ಚಾಲಕನನ್ನು ನಾನು ನೋಡಿಲ್ಲ . ಆರೋಪಿಯನ್ನು ಗುರುತಿಸಲು ಆಗುವುದಿಲ್ಲ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಅಪಘಾತವಾದ ದಿನಾಂಕ 09.06.2017 ರಂದು ರಾತ್ರಿ 08.25 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ನಮ್ಮ ತಂದೆ ಮೂತ್ರ ವಿಸರ್ಜನೆ ಮಾಡಿ ಮರಳಿ ಮನೆಗೆ ಬರುತ್ತಿರುವಾರ ಮೊಟಾರ ಸೈಕಲ ನಂ.KA-32-EM-6545 ಅದರ ಚಾಲಕ ಅತೀ ಜೋರಿನಿಂದ ಮತ್ತು ನಿಷ್ಕಾಳಜೀತನದಿಂದ ಕೊಡಂಗಲ್ ಕಡೆಯಿಂದ ಸೇಡಂ ಕಡೆಗೆ ಚಲಾಸಿಕೊಂಡು ಬಂದು ನಮ್ಮ ತಂದೆಗೆ ಹಾಯಿಸಿ ಅಪಘಾತ ಮಾಡಿರುತ್ತಾನೆ ಎಂದರೆ ನಾನು ನೋಡಿಲ್ಲ, ಅಪಘಾತಪಡಿಸಿದ ನಂತರ ಮೊಟಾರ ಸೈಕಲ ಚಾಲಕನು ಮೊಟಾರ ಸೈಕಲ ನಿಲ್ಲಿಸದೇ ಹಾಗೇ ಹೋಗಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಮೊಟಾರ ಸೈಕಲ

ಸವಾರನ್ನು ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಘಟನೆಯ ಕುರಿತು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–2 ಎಂದು ಗುರುತಿಸಲಾಯಿತು. ನಿಪಿ–2 ರಂತೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

*SYH*

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ.572/2017

ಸಿಡಬ್ಲ್ಯೂ-4 ಪಿಡಬ್ಲ್ಯೂ-3

| | |
|---|---|
| ಹೆಸರುಃ | ಶ್ರೀ ವಿಜಯರೆಡ್ಡಿ |
| ತಂದೆಯ ಹೆಸರುಃ | ರಾಮನಗೌಡ |
| ವಯಸ್ಸುಃ | 36 ವರ್ಷ |
| ಉದ್ಯೋಗಃ | ವ್ಯಾಪಾರ |
| ವಾಸ ಸ್ಥಳಃ | ಬಟಗೇರಾ (ಕೆ) ಗ್ರಾಮ |

ದಿನಾಂಕ 13-09-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ ತೋರಿಸುತಿರುವ ದಾಖಲೆ ಮೇಲಿರುವ ಸಹಿ ನನ್ನದೆ ಇರುತ್ತದೆ. ಸಾಕ್ಷಿ ಗುರುತಿಸಿದ ದಾಖಲೆಯು ಗುನ್ನಾ ಸ್ಥಳದ ಪಂಚನಾಮೆಯಾಗಿದ್ದು, ಪಂಚನಾಮೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3ರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ನಾನು ಯಾವುದೇ ಪಂಚನಾಮೆಯಲ್ಲಿ ಭಾಗಿಯಾಗಿಲ್ಲ. ಘಟನೆಯ ಬಗ್ಗೆ ನನಗೆ ಏನು ಗೊತ್ತಿಲ್ಲ. ಈಗ ತೋರಿಸುತ್ತಿರುವ ಭಾಗಚಿತ್ರದಲ್ಲಿ ನಾನು ಕಾಣಿಸುತ್ತೇನೆ ಭಾವಚಿತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು. ಪೊಲೀಸರ ಕೋರಿಕೆಯ ಮೇರೆಗೆ ನಾನು ಅವರೊಂದಿಗೆ ನಿಂತಿರುತ್ತೇನೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 09.06.2017 ರಂದು ಸೇಡಂ-ಕೊಡಂಗಲ್ ಮೇನ ರೋಡಿನ ಪಿರ್ಯಾಧಿ ಮನೆಯ ಮುಂದಿನ ರಸ್ತೆಯ ಮೇಲೆ ರಸ್ತೆ ಅಪಘಾತವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ದಿನಾಂಕ 11.06.2017ರಂದು ಬೆಳಗ್ಗೆ 09.15 ಗಂಟೆಗೆ ಪೊಲೀಸರು ಅಪಘಾತ ಸ್ಥಳದಲ್ಲಿ ಪಂಚನಾಮೆಗೆಂದು ನನ್ನನ್ನು ಕರೆದಿದ್ದರು ಎಂದರೆ ಸರಿಯಲ್ಲ. ಆಗ ಪಂಚನಾಮೆಯಲ್ಲಿ ಭಾಗವಹಿಸಿ ಮುಂಜಾನೆ 10.15ರವರೆಗೆ ಪಂಚನಾಮೆ ಕೈಗೊಂಡು ನಿಪಿ-3ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಪಾಲ್ಗೊಂಡಿದ್ದರೂ ನಿಪಿ-4ರಂತೆ ಭಾವಚಿತ್ರದಲ್ಲಿ ಘಟನಾ ಸ್ಥಳದಲ್ಲಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

*SYH

# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂ.572/2017

ಸಿಡಬ್ಲ್ಯೂ-5 ಪಿಡಬ್ಲ್ಯೂ-4

| | |
|---|---|
| ಹೆಸರುಃ | ಶ್ರೀ ನಾಗರೆಡ್ಡಿ |
| ತಂದೆಯ ಹೆಸರುಃ | ಶ್ರೀಶೈಲರೆಡ್ಡಿ ಹೂವಿನಬಾಯಿ |
| ವಯಸ್ಸುಃ | 32 ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸ ಸ್ಥಳಃ | ಬಟಗೇರಾ (ಕೆ) ಗ್ರಾಮ |

ದಿನಾಂಕ 13-09-2022

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಈಗ ತೋರಿಸುತಿರುವ ದಾಖಲೆ ಮೇಲಿರುವ ಸಹಿ ನನ್ನದೆ ಇರುತ್ತದೆ. ಸಾಕ್ಷಿ ಗುರುತಿಸಿದ ದಾಖಲೆಯು ಗುನ್ನಾ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ಪಂಚನಾಮೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ನಾನು ಯಾವುದೇ ಪಂಚನಾಮೆಯಲ್ಲಿ ಭಾಗಿಯಾಗಿಲ್ಲ. ಘಟನೆಯ ಬಗ್ಗೆ ನನಗೆ ಏನು ಗೊತ್ತಿಲ್ಲ. ಈಗ ತೋರಿಸುತ್ತಿರುವ ಭಾಗಚಿತ್ರದಲ್ಲಿ ನಾನು ಕಾಣಿಸುತ್ತೇನೆ ಭಾವಚಿತ್ರವನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿರುತ್ತದೆ. ಪೊಲೀಸರ ಕೋರಿಕೆಯ ಮೇರೆಗೆ ನಾನು ಅವರೊಂದಿಗೆ ನಿಂತಿರುತ್ತೇನೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿನಾಂಕ 09.06.2017 ರಂದು ಸೇಡಂ-ಕೊಡಂಗಲ್ ಮೇನ ರೋಡಿನ ಪಿರ್ಯಾಧಿ ಮನೆಯ ಮುಂದಿನ ರಸ್ತೆಯ ಮೇಲೆ ರಸ್ತೆ ಅಪಘಾತವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ದಿನಾಂಕ 11.06.2017 ರಂದು ಬೆಳಗ್ಗೆ 09.15 ಗಂಟೆಗೆ ಪೊಲೀಸರು ಅಪಘಾತ ಸ್ಥಳದಲ್ಲಿ ಪಂಚನಾಮೆಗೆಂದು ನನ್ನನ್ನು ಕರೆದಿದ್ದರು ಎಂದರೆ ಸರಿಯಲ್ಲ. ಆಗ ಪಂಚನಾಮೆಯಲ್ಲಿ ಭಾಗವಹಿಸಿ ಮುಂಜಾನೆ 10.15 ರವರೆಗೆ ಪಂಚನಾಮೆ ಕೈಗೊಂಡು ನಿಪಿ-3 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಪಾಲ್ಗೊಂಡಿದ್ದರೂ ನಿಪಿ-4 ರಂತೆ ಭಾವಚಿತ್ರದಲ್ಲಿ ಘಟನಾ ಸ್ಥಳದಲ್ಲಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

*SYH